# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.655-20114** **ಡಿ . ಡಬ್ಲು: 1**

| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಪ್ರಕಾಶ್<br>ಹೊರಳವಾಡಿ ಗ್ರಾಮ, ನಂಜನಗೂಡು ತಾ. |
|---|---|
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ** 20-06-2025. |

**<u>ಮುಂದುವರೆದ ಪಾಟೀ ಸವಾಲು: ವಾದಿಗಳ ಪರ ಶ್ರೀ ಎಂ.ಎಸ್  ವಕೀಲರಿಂದ:</u>**

4. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿದ್ದು ಸದರಿ ಪೋಟೋದಲ್ಲಿ ಕಾಣುತ್ತಿರುವ ಹೆಂಗಸು ಶುಂಭು ರವರ ಹೆಂಡತಿ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಮರಣ ಶಾಸನದಲ್ಲಿ ಯಾವ-ಯಾವ ಆಸ್ತಿಗಳು ಸೇರಿವೆ ಎಂದು ನಿಮಗೆ ಗೊತ್ತೆ ಎಂಬ ಪ್ರಶ್ನೆಗೆ ಸಾಕ್ಷಿ ಅದರಲ್ಲಿ ಜಮೀನು ಮತ್ತು ಮನೆ ಇರುತ್ತವೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಮನೆಗೆ ಸೇರಿದ ಚೆಕ್ಕುಬಂದಿ ಪೂರ್ವಕ್ಕೆ-ರಸ್ತೆ, ಪಶ್ಚಿಮಕ್ಕೆ-ಸುಬ್ಬಯ್ಯನವರಿಗೆ ಸೇರಿದ ಮನೆ, ದಕ್ಷಿಣಕ್ಕೆ-ಖಾಲಿ ಜಾಗ ಹಾಗೂ ಉತ್ತರಕ್ಕೆ-ರಸ್ತೆ ಇರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ-ಸುಬ್ಬಯ್ಯನವರಿಗೆ ಸೇರಿದ ಮನೆ ಎಂದರೆ ವಾದಿಗಳು ವಾಸವಾಗಿರುವ ಮನೆ ಆಗಿರುತ್ತದೆ ಎಂದರೆ ಸರಿ. ಸದರಿ ಮನೆಯನ್ನು ನಾನು, ಉದಯ್ ಕುಮಾರ್, ಶಿವನಾಗ ಹಾಗೂ ವೃಷಬೇಂದ್ರಸ್ವಾಮಿ ಎಲ್ಲರೂ ಸೇರಿ ವಿಭಾಗ ಮಾಡಿಕೊಂಡು ವಾಸವಾಗಿರುತ್ತೇವೆ.

5. ನಿಡಿ–3 ಉದಯ್ ಕುಮಾರ್ ರವರು ವಾಸವಾಗಿರುವ ಸ್ವತ್ತಿಗೆ ಸೇರಿದ ದಾಖಲೆ ಎಂದರೆ ಸರಿ. ಸದರಿ ಸ್ವತ್ತು ಮರಣ ಶಾಸನದ ಮೇರೆಗೆ ಬಂದ ಮನೆ ಎಂದರೆ ಸರಿ. ನಿಡಿ–4 ವೃಷಬೇಂದ್ರ ರವರಿಗೆ ಮರಣ ಶಾಸನದ ಮೇರೆಗೆ ಬಂದ ಮನೆ ಎಂದರೆ ಸರಿ. ನಿಡಿ–5 ನನಗೆ ಸೇರಿದ ಸ್ವತ್ತಿನ ದಾಖಲೆ ಎಂದರೆ ಸರಿ. ನಿಡಿ–6 ಶಿವನಾಗ ರವರಿಗೆ ಸೇರಿದ ಸ್ವತ್ತಿನ ದಾಖಲೆ ಎಂದರೆ ಸರಿ. ನಿಡಿ–3 ರಿಂದ 6 ರಲ್ಲಿರುವ ದಾಖಲೆಗಳು ನೀವೆಲ್ಲರು ವಾಸವಾಗಿರುವ ಮನೆಗೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿ. ನಿಡಿ–3 ರಿಂದ 6 ರ ದಾಖಲೆಗಳು ದಾವಾ ಷೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ಇರುವ ವಾಸದ ಮನೆಯ ದಾಖಲೆಗಳು ಎಂದರೆ ಸರಿ. ಸಾಕ್ಷಿ ಮುಂದುವರೆದು ಪೂರ್ವಕ್ಕೆ ರಸ್ತೆ ಇದ್ದು, ಪಶ್ಚಿಮಕ್ಕೆ ನಮಗೆ ಸೇರಿದ ತಿರುಗಾಡುವ ಗಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿಡಿ–3 ರಿಂದ 6 ರವರೆಗಿನ ದಾಖಲೆಗಳು ನೀವು ವಾಸವಾಗಿರುವ ಮನೆಯ ದಾಖಲೆಗಳಾಗಿದ್ದು, ಅವು ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿಗೆ ಯಾವುದೇ ದಾಖಲೆಗಳನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿಗಳು ಸ್ವಾಧೀನಾನುಭವದಲ್ಲಿ ಇದ್ದು, ನೀವು ಅವರ ಸ್ವಾಧೀನಕ್ಕೆ ಅಡ್ಡಿ ಪಡಿಸುತ್ತಿದ್ದೀರಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೇ ದಾವಾ ಷೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತೇವೆ ಎಂದು

ನುಡಿಯುತ್ತಾರೆ. ನೀವು ಹೇಳುವಂತೆ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಹಾಗೂ ನಿಮ್ಮ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ ಹಾಗೂ ನೀವು ನ್ಯಾಯಾಲಯದಲ್ಲಿ  ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನಮಗೆ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ದಾವಾ ಷೆಡ್ಯೂಲ್ ಸ್ವತ್ತಿನ್ನು ವಾದಿಗಳಿಂದ ಖಸಿದುಕೊಳ್ಳಲು ಕೊಳ್ಳುವ ಉದ್ದೇಶದಿಂದ  ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**